ಅ) ಹುಲಿಗಳು ಜಾನುವಾರುಗಳನ್ನು ಕೊಂದರೆ ಸರ್ಕಾರದ ಪರಿಹಾರ ಕೊಡಬೇಕಾಗಿದ್ದರೂ ಜಾನುವಾರುಗಳ ಬೆಳೆಗಳ ಮೌಲ್ಯದ ಒಂದು ಭಾಗ ಕೇವಲ ರೂ. ೩೦೦-೦೦ನ್ನು ಮಾತ್ರ ಕೊಡುತ್ತಿದ್ದು ಬೆಳೆಗೆ ಯಾವ ಪರಿಹಾರವನ್ನು ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ವನ್ಯ ಪ್ರಾಣಿಗಳಿಂದ ನಾಶವಾಗುತ್ತಿರುವ ಜಾನುವಾರು ಮತ್ತು ಫಸಲು ರಕ್ಷಣೆಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜಿ.ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ವನ್ಯ ಪ್ರಾಣಿಗಳಿಂದ ಬೆಳೆ ಹಾನಿ ಹಾಗೂ ಜಾನುವಾರುಗಳ ಪ್ರಾಣ ಹಾನಿಯಾಗಿದ್ದಲ್ಲಿ ಅಂತಹವರಿಗೆ ಪಂಚಾಯಿತಿದಾರರು ಈ ಬಗ್ಗೆ ಬರೆದ ಮಹಜರುಗಳಲ್ಲಿ ನಮೂದಿಸಿರುವ ಅಂದಾಜು ಪರಿಹಾರ ಹಾಗೂ ಈ ಬಗ್ಗೆ ಸಂಬಂಧಪಟ್ಟ ಅರಣ್ಯಾಧಿಕಾರಿಗಳ ಶಿಫಾರಸ್ಸಿನ ಆಧಾರದ ಮೇಲೆ ಪರಿಹಾರ ನೀಡಲಾಗಿದೆ.

ಇ) ವನ್ಯ ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದ ಕಡೆಗಳಲ್ಲಿ ವನ್ಯ ಪ್ರಾಣಿಗಳನ್ನು ಕಾಡಿನೊಳಗೆ ಓಡಿಸಲಾಗುತ್ತಿದೆ.

ಮಾಲೂರು ತಾಲ್ಲೂಕು ಚಿಕ್ಕಕುಂತೂರಿನಲ್ಲಿ ಗ್ರಾಮಾಂತರ ಪಶುವೈದ್ಯಶಾಲೆ ಮಂಜೂರಾತಿ

೧೩೦೩ (೨೭೪೯) ಶ್ರೀ ಹೆಚ್.ಬಿ. ದ್ಯಾವೀರಪ್ಪ, (ಮಾಲೂರು).—ಮಾನ್ಯ ಪಶು ಹಾಗೂ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;—

ಅ) ಮಾಲೂರು ತಾಲ್ಲೂಕು ಚಿಕ್ಕಕುಂತೂರು ಗ್ರಾಮದಲ್ಲಿ ಗ್ರಾಮಾಂತರ ಪಶುವೈದ್ಯ ಶಾಲೆ ೧೯೭೯ರಲ್ಲಿ ಮಂಜೂರಾಗಿದ್ದು, ಅಲ್ಲಿನ ಜನತೆ ಅನೇಕ ಸಾರಿ ಮನವಿ ಸಲ್ಲಿಸಿದ್ದಾಗ್ಯೂ ಪಶುವೈದ್ಯ ಶಾಲೆ ಪ್ರಾರಂಭವಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಪಶುವೈದ್ಯ ಶಾಲೆ ಪ್ರಾರಂಭಿಸಲು ಸರ್ಕಾರದವರು ಸೂಕ್ತ ಕ್ರಮಕೈಗೊಳ್ಳುವರೆ ?

ಶ್ರೀ ಮಹಮ್ಮದ್ ಮೊಯಿನುದ್ದೀನ್ (ಪಶು ಹಾಗೂ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಸಚಿವರು).—

ಅ) ಬಂದಿದೆ.

ಆ) ಈ ಬಗ್ಗೆ ಕೋಲಾರ ಜಿಲ್ಲಾ ಪರಿಷತ್‌ನವರೇ ಸೂಕ್ತ ಕ್ರಮಕೈಗೊಳ್ಳಬೇಕಾಗಿರುತ್ತದೆ.

ಚೆಮಕಾ ನೂಲು- ಹತ್ತಿ ನೂಲು ಹಾಗೂ ರೇಷ್ಮೆ ದರಗಳಂ ಹೆಚ್ಚಿರುವುದರ ಬಗ್ಗೆ

೧೩೦೪ (೨೭೭೪) ಶ್ರೀ ಶಿವಸಂಗಪ್ಪ ಶಿದ್ದಪ್ಪ ಕಡಪಟ್ಟಿ (ಹುನಗುಂದ).—ಮಾನ್ಯ ಬಂದರು, ವಿಮಾನಯಾನ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಚಮಕಾ ನೂಲು, ಹತ್ತಿನೂಲು ರೇಷ್ಮೆ ದರಗಳು ಹೆಚ್ಚಿರುವುದರಿಂದ ನೇಕಾರರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?